(*b*) what steps the Government have so far taken to remove or minimise these hardships ?

A.—Sri A. G. RAMACHANDRA RAO (Minister for Law and Education) [ON BEHALF OF SRI H. SIDDAVEERPPA (Minister for Home)].—

(*a*) Government are aware that generally where buses ply in more than one State, tax is payable on each vehicle in all the States concerned and that renewals of permits have also to be effected in all the States. This, however, is not the case in respect of buses plying on certain routes between Mysore and Bombay.

(*b*) The question of avoiding double taxation has been under consideration in consultation with the States concerned. It has also been discussed in the Transport Advisory Council constituted by the Central Government. Discussions with Andhra and Madras are proposed with a view to arriving at a suitable arrangement.

ಶ್ರೀ ಮಾಲ ಮರಿಯಪ್ಪ.—(*a*) ಪ್ರಶ್ನೆಗೆ ಉತ್ತರವಾಗಿ ಮೈಸೂರು ಮತ್ತು ಬೊಂಬಾಯಿಯ ಕೆಲವು ರಸ್ತೆಗಳಲ್ಲಿ ಬಸ್ಸುಗಳು ಸಂಚಾರ ಮಾಡಿದರೆ ಎರಡು ಸಲ ತೆರಿಗೆ ಕೊಡಬೇಕಾಗಿಲ್ಲವೆಂದು ಹೇಳಿದೆ. ಸುಮಾರು ಅಂಥ ರಸ್ತೆಗಳೆಷ್ಟಿವೆ ?

*ಶ್ರೀ ಎ. ಜಿ. ರಾಮಚಂದ್ರರಾವ್.—ಹರಿಹರದ ಮೇಲೆ ಹೋಗುವ ರಸ್ತೆಯ ವಿಷಯದಲ್ಲಿ ಒಂದು ಒಪ್ಪಂದವಾಗಿದೆ. ಅದೇ ರೀತಿ ಒಪ್ಪಂದಕ್ಕೆ ಬಂದು ಒಂದುಕಡೆ ತೆರಿಗೆ ಹಾಕುವಂತೆ ಮಾಡಲು ಆಂಧ್ರ ಮತ್ತು ಮದರಾಸು ಸರ್ಕಾರದೊಂದಿಗೆ ವ್ಯವಹಾರ ನಡೆಸಲಾಗುತ್ತದೆ.

ಶ್ರೀ ಮಾಲ ಮರಿಯಪ್ಪ.—ಈಗಾಗಲೆ ಮದರಾಸು ಮತ್ತು ಆಂಧ್ರ ಸರ್ಕಾರದ ಪ್ರತಿನಿಧಿಗಳು ಮಾಟ್ ಮಾಡಿದ್ದಾರೇ ! ಅಥವಾ ಇನ್ನುಮುಂದೆ ಮಾಟ್ ಮಾಡಬೇಕೆಂಬ ಉದ್ದೇಶವಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇನ್ನೂ ಮಾಟ್ ಮಾಡಿಲ್ಲ, ಮಾಡಬೇಕು.

ಶ್ರೀ ಮುದ್ದುರಾಮಯ್ಯ.—ಆಂಧ್ರ ಮತ್ತು ಮದರಾಸು ಪ್ರಾಂತಗಳಿಂದ ನಮ್ಮ ದೇಶಕ್ಕೆ ಬರುವ ಬಸ್ಸುಗಳಿಗೆ ತೆರಿಗೆಯಿಂದ ವಿನಾಯಿತಿ ಕೊಟ್ಟಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಯಾವುದಕ್ಕೂ ವಿನಾಯಿತಿ ಕೊಟ್ಟಿಲ್ಲ.

ಶ್ರೀ ಮುದ್ದುರಾಮಯ್ಯ.—ಈಗ ಓಡಾಡುವ ಅನೇಕ ಆಂಧ್ರ ಮತ್ತು ಮದರಾಸ್ ಪ್ರಾಂತಗಳ ಬಸ್ಸುಗಳಿಗೆ ತೆರಿಗೆ ವಿನಾಯಿತಿ ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ಮುದ್ದುರಾಮಯ್ಯ.—ಇದೇ ಸಂಬಂಧವಾಗಿ ಹಿಂದಿನ ಬಡ್ಜೆಟ್ ಅಧಿವೇಶನದಲ್ಲಿ ಪ್ರಶ್ನೆ ಬಂದಾಗ ಈ ವಿಚಾರವನ್ನು ಇತ್ಯರ್ಥ ಮಾಡುತ್ತೇವೆಂದು ಹೇಳಿದ್ದರು. ಒಂದು ವರ್ಷವಾದರೂ ಇನ್ನೂ ಮಾಡಿಲ್ಲ. ಈಗಲಾದರೂ ಸರ್ಕಾರದವರು ಜಾಗ್ರತೆ ಇದಕ್ಕೆ ಪ್ರಯತ್ನ ಮಾಡುವರೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಈ ತೊಂದರೆಯನ್ನು ಜಾಗ್ರತೆ ತಪ್ಪಿಸಲು ಪ್ರಯತ್ನಮಾಡುತ್ತೇವೆ.

Mr. SPEAKER.—Questions Nos. 313 and 523 will be taken up together.

Road Transport (Overloading).

Q.—313. Sri T. HANUMAIAH (Hiriyur—Scheduled Castes).—

Will the Government be pleased to state :—

(*a*) whether there is any difference in the rules between the private bus traffic and the Government Road Transport bus traffic according to the law relating to the Vehicular traffic ;

(*b*) the percentage of overloading allowed in the Government buses ;

(*c*) the percentage of overloading allowed in the case of private buses ;

(*d*) whether it has come to their notice that overloading in Government buses is being ignored whereas fines are being levied and cases are being launched when there is overloading in private buses ?

A.—Sri A. G. RAMACHANDRA RAO (Minister for Law and Education) [ON BEHALF OF SRI H. SIDDA VEERAPPA) (Minister for Home)].—

(*a*) No.
(*b*) Nil.
(*c*) Nil.
(*d*) No.

Q.—523. Srimathi Bellary SIDDAMMA (Davanagere).—

Will the Government be pleased to state :—

(*a*) whether it has come to their notice that on many occasions the Government Road Transport buses are overloaded beyond limit ;

(*b*) whether prosecutions are being launched to prevent this ?

A.—Sri A. G. RAMACHANDRA RAO (Minister for Law and Education) [ON BEHALF OF SRI H. SIDDAVEERAPPA) (Minister for Home)].—

(*a*) Overloading in Government buses has been brought to notice.

(*b*) Yes.

ಶ್ರೀ ಟಿ. ಹನುಮಯ್ಯ.—ಹಿಂದೆ ಒಳಾಡಳಿತ ಶಾಖೆಯ ಸಚಿವರು ಸರ್ಕಾರಿ ಬಸ್ಸುಗಳಲ್ಲಿ ಸ್ವಲ್ಪ ಓವರ್‌ಲೋಡ್ ಹಾಕುತ್ತೇವೆಂದು ಹೇಳಿದ್ದರು. ಈಗ ಹಾಕುತ್ತಿಲ್ಲವೆಂದು ಹೇಳುತ್ತಾರೆ. ಯಾವುದು ನಿಜವೆಂದು ನಾವು ತಿಳಿದುಕೊಳ್ಳಬೇಕು ?

ಅಧ್ಯಕ್ಷರು.—523ನೆಯ ಪ್ರಶ್ನೆಗೆ ಉತ್ತರವಾಗಿ "Overloading in Government buses has been brought to notice." ಎಂದು ಹೇಳಿದ್ದಾರೆ.

ಶ್ರೀ ಟಿ. ಹನುಮಯ್ಯ.—ಸರ್ಕಾರಿ ಬಸ್ಸುಗಳಲ್ಲಿ ಓವರ್‌ಲೋಡಿಂಗ್ ಇಲ್ಲವೆ ?

*ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಓವರ್‌ಲೋಡ್ ಮಾಡಿದಾಗ ಖಾಸಗಿ ಬಸ್ಸುಗಳಿಗೆ ಯಾವ ಟ್ರೀಟ್‌ಮೆಂಟ್ ಇದೆಯೋ. ಅದೇ ಸರ್ಕಾರಿ ಬಸ್ಸುಗಳಿಗೂ ಅನ್ವಯಿಸುತ್ತದೆ.

ಶ್ರೀ ಟಿ. ಹನುಮಯ್ಯ.—ಖಾಸಗಿ ಬಸ್ಸುಗಳಲ್ಲಿ ಓವರ್‌ಲೋಡ್ ಮಾಡಿದರೆ ಕೇಸ್‌ಹಾಕ ತ್ತಾರೆ, ಹಾಗೆ ಸರ್ಕಾರಿ ಬಸ್ಸುಗಳಲ್ಲಿ ಓವರ್‌ಲೋಡ್ ಮಾಡಿದಾಗ ಕೇಸ್‌ಹಾಕಿದ್ದೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—23 ಕೇಸುಗಳನ್ನು ಹಾಕಿದೆ.

ಶ್ರೀ ಟಿ. ಹನುಮಯ್ಯ.—ಆ ಸಂದರ್ಭದಲ್ಲಿ ಯಾರಾರಿಗೆ ಏನೇನು ಶಿಕ್ಷೆಮಾಡಿದೆ ?

Sri A. G. RAMACHANDRA RAO.—Three cases were put up in Mysore City for overloading in Government buses in Petty Case Nos. 121, 160, 169 under Section 195, Motor Vehicles Act. All these cases are pending trial.

Two cases were registered by Hassan Town Police under Petty Case Nos. 937 and 965 for overloading. Both the cases were withdrawn as per the request of the General Manager, Mysore Government Road Transport, Bangalore.

Eight cases were put up by Bangalore North Police. Four cases ended in conviction and the accused were sentenced to pay a fine of Rs. 20, 15, 15 and 20 each and the remaining 4 cases are pending trial.

Eight cases were put up in Bangalore District for overloading noticed at Doddaballapur and Channapatna. Two cases ended in conviction and the accused were sentenced to pay a fine of Rs. 15 and 5 each and the remaining 6 cases are pending trial.

Two instances of overloading in Chitaldrug District came to notice. In one case the conductor of the bus was severely warned and fined by the General Manager, and in the other case the conductor and the driver failed to appear in the court in spite of the service of notice by the police and the case is pending trial.

Thus 23 cases of overloading were noticed so far.

ಶ್ರೀ ಟಿ. ಹನುಮಯ್ಯ.—ಜುಲ್ಮಾನೆ ಯಾರು ಕೊಡುವವರು ?

ಶ್ರೀ ಎ. ಜಿ. ರಾಮಚಂದ್ರರಾವ್.—ಅಪರಾಧಿಗಳು ಕೊಡುತ್ತಾರೆ.

ಶ್ರೀ ಟಿ. ಹನುಮಯ್ಯ.—ಕಂಡಕ್ಟರು ಮತ್ತು ಡ್ರೈವರು ಸರ್ಕಾರಿ ನೌಕರರು ; ಓವರ್‌ಲೋಡ್ ಆಗಿ ಬಂದ ಹಣವನ್ನು ತೆಗೆದು ಕೊಳ್ಳುವವರು ಯಾರು ?

ಶ್ರೀ ಎ. ಜಿ. ರಾಮಚಂದ್ರರಾವ್.—ಓವರ್‌ಲೋಡ್ ಮಾಡಿದರೆ ಜುಲ್ಮಾನೆ ಹಾಕುತ್ತಾರೆ, ಅದರಿಂದ ಬಂದ ಹಣವನ್ನು ತೆಗೆದುಕೊಳ್ಳುವುದು ಸರ್ಕಾರ, ಕೊಡುವವರು ಸಂಬಂಧಪಟ್ಟ ನೌಕರರು.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಓವರ್ ಲೋಡ್ ಹಾಕುವುದರಿಂದ ಜನರಿಗೆ ಕಷ್ಟವಾಗುವುದಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಓವರ್‌ಲೋಡ್ ಹಾಕಬೇಕೆಂದು ಯಾರು ಒತ್ತಾಯ ಪಡಿಸುತ್ತಿಲ್ಲ; ಹಾಕಿದರೆ ಅವರು ಶಿಕ್ಷೆ ಅನುಭವಿಸುತ್ತಾರೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮ.—ಓವರ್ ಲೋಡ್ ಹಾಕಿದರೆ ಸರ್ಕಾರಕ್ಕೆ ಹೆಚ್ಚು ಹಣ ಬರುತ್ತದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಜುಲ್ಮಾನೆ ಹಾಕಿದರೂ ಸರ್ಕಾರಕ್ಕೆ ಬರುತ್ತದೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಹೇಮಾವತಿ ಎಕ್ಸ್‌ಪ್ರೆಸ್, ಜೋಗಿ ಮಟ್ ಎಕ್ಸ್‌ಪ್ರೆಸ್, ಗಿರಿ ಎಕ್ಸ್‌ಪ್ರೆಸ್ ಇವಲ್ಲದೆ ಪ್ರತಿದಿವಸವೂ ಇನ್ನೂ ಎರಡು ಬಸ್ಸುಗಳಿಗೆ ಹಾಕುವಷ್ಟು ಜನರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಂದಿಲ್ಲ.

Mr. SPEAKER.—Has the Hon'ble Member brought it to the notice of Government ?

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಆಲ್ಲ ಬೇರೆ ಬಸ್‌ಗಳಿಲ್ಲದೇಯಿರುವುದರಿಂದಲೂ ಹೆಚ್ಚು ಜನ ಪ್ರಯಾಣೀಕರು ಬರುವುದರಿಂದಲೂ ಓವರ್ ಲೋಡ್ ಹಾಕುತ್ತಾರೆಂಬುದು ಗೊತ್ತಿದೆಯೇ ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

Sri Mulka GOVINDA REDDY.—May I know whether any cases have been launched on the Government Transport buses which run from Chitaldrug to Bangalore ?

Sri A. G. RAMACHANDRA RAO.—The routes on which overloading has taken place are not given here. I will give the information to the Hon'ble Member later if he wants.

Sri Mulka GOVINDA REDDY.—Has it come to the notice of the Government that many complaints have been made on the floor of this House that there is much overloading on these buses?

Sri A. G. RAMACHANDRA RAO.—Therefore strict instructions have been issued not to overload.

Sri Mulka GOVINDA REDDY.—Is it a fact that the Government has issued secret circulars to the police not to launch cases against the buses of the Mysore Government Road Transport?

Sri A. G. RAMACHANDRA RAO.—No.

Sri Mulka GOVINDA REDDY.—Or to wink at overloading?

Sri A. G. RAMACHANDRA RAO.—Neither to wink at overloading nor not to charge for overloading.

Buses on Nanjangud-Chamarajanagar Road.

Q.—546. Sri U. M. MADAPPA (Chamarajanagar).—

Will the Government be pleased to state :—

(*a*) the number of private buses running on the Nanjangud-Chamarajanagar Road;

(*b*) the number of Government buses running;

(*c*) the number of extra buses required to run only Government buses on this road?

A.—Sri A. G. RAMACHANDRA RAO (Minister for Law and Education) [On behalf of Sri H. SIDDAVEERAPPA (Minister for Home)].—

(*a*) Eleven.

(*b*) Two.

(*c*) This depends on the amount of traffic but it is considered that five or six buses of adequate capacity may meet the requirements.

ಶ್ರೀ ಯು. ಎಂ. ಮಾದಪ್ಪ.—ನಂಜನಗೂಡಿನಿಂದ ಚಾಮರಾಜನಗರಕ್ಕೆ ಹೋಗತಕ್ಕ ಖಾಸಗಿ ಬಸ್ಸುಗಳೆಷ್ಟು?

Sri A. G. RAMACHANDRA RAO.—From Nanjangud to Chamarajanagar two buses, namely, B.S.V. Motor Service and Venkateswara Motor Service are running and the others go further.

ಶ್ರೀ ಯು. ಎಂ. ಮಾದಪ್ಪ.—ಹೆಚ್ಚೊಂದು ಎಂದು ಹೇಳಿದ್ದೀರಿ, ಮಂಜೂರಾಗಿರುವ ಲೈಸೆನ್ಸುಗಳಿಷ್ಟೇ? ಅಥವಾ ಇಷ್ಟು ಬಸ್ಸುಗಳು ಓಡಾಡುತ್ತಿವೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಸ್ ಸರ್ವಿಸ್‌ಗಳು ಓಡಾಡುತ್ತಿವೆ. There are eleven buses plying in that route.

ಶ್ರೀ ಯು. ಎಂ. ಮಾದಪ್ಪ.—ನೇರವಾಗಿ ನಂಜನಗೂಡಿನಿಂದ ಚಾಮರಾಜನಗರಕ್ಕೆ ಹೋಗುವುದು ನಾಲ್ಕು ಬಸ್ಸುಗಳು ಮಾತ್ರ; ಅಲ್ಲಿ ಸಬ್‌ಡಿವಿಜನ್ ಆಫೀಸು ಮುಂತಾದ ಕಚೇರಿಗಳಿರುವುದರಿಂದ ಈ ನಾಲ್ಕು ಬಸ್ಸುಗಳು ಸಾಲದೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ; ನಮಗೆ ಬಂದಿರುವ ವರದಿಯ ಪ್ರಕಾರ ಏಳು ಬಸ್ಸುಗಳು ನಂಜನಗೂಡಿನಿಂದ ಚಾಮರಾಜನಗರದಿಂದಾಚೆಗೂ ಹೋಗುತ್ತವೆ, ಆದುದರಿಂದ ಚಾಮರಾಜನಗರಕ್ಕೆ ಹೋಗಲೇಬೇಕು ಈ ಏಳು ಬಸ್ ಸರ್ವಿಸ್‌ಗಳು.

(1) B.S.V. Motor Service.—Nanjangud—Chamarajanagar.

(2) Venkateswara Motor Service.—Nanjanagud—Chamarajanagar.

(3) Anjaneya Motor Service.—Saragur—Nanjangud-Chamarajanagar.

(4) Maruthi Motor Service.

(5) K. V. Motor Service.—Nanjangud — Chamarajanagar — Terakanambi.

(6) Sivalinga Motor Service.

(7) Allam Motor Service.— Nanjanagud—Chamarajanagar—Arkal.

In sections also we have got four buses.

ಶ್ರೀ ಯು. ಎಂ. ಮಾದಪ್ಪ.—ತಾವು ಹೇಳಿದ ಕೆಲವು ಲೈಸೆನ್ಸುಗಳಲ್ಲಿ ಬಸ್ಸುಗಳು ಓಡಾಡುತ್ತಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ.

ಶ್ರೀ ಯು. ಎಂ. ಮಾದಪ್ಪ.—ಬಸ್ ರೂಟ್‌ಗಳನ್ನು ಮಂಜೂರು ಮಾಡಿದ್ದರೂ ಅನೇಕ ಬಸ್ಸುಗಳು, ಓಡಾಡದೇಯಿರುವುದರಿಂದ ಜನರಿಗೆ ತೊಂದರೆಯಾಗಿರುವುದು ತಮ್ಮ ಗಮನಕ್ಕೆ ಬಂದಿಲ್ಲವೆ?

ಶ್ರೀ ಎ. ಜಿ. ರಾಮಚಂದ್ರರಾವ್:—ಬಂದಿಲ್ಲ.

ಶ್ರೀ ಯು. ಎಂ. ಮಾದಪ್ಪ.—ಸರ್ಕಾರಿ ಬಸ್ಸುಗಳು ಎರಡು ಎಂದು ಹೇಳಿದ್ದೀರಿ, ಅದು ಒಳ್ಳೆಯ ವ್ಯಾಪಾರಸ್ಥಳವಾಗಿರುವುದರಿಂದ ಆ ರೂಟನ್ನು ಪೊನಾಪಲ ಮಾಡಿಕೊಳ್ಳುವುದಕ್ಕೆ ಅವಕಾಶವಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ರಾಷ್ಟ್ರೀಕರಣವನ್ನು ಕ್ರಮೇಣ ಮಾಡುತ್ತೇವೆ.

ಶ್ರೀ ಯು. ಎಂ. ಮಾದಪ್ಪ.—ಹೊಸದಾಗಿ ಆರು ಲೈನ್ಸ್ ಮಂಜೂರು ಮಾಡಿರುವುದರಲ್ಲಿ ಇದೂ ಒಂದಲ್ಲವೆ?

Sri A. G. RAMACHANDRA RAO.—I will lay it on the table.